ಸರ್ಕಾರಿ ನೌಕರರ ನಿವೃತ್ತಿ ವಯಸ್ಸು

೧೨. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಈಗಿರುವ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ರಿಂದ ೫೫ಕ್ಕೆ ಇಳಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ಯಾವ ಕ್ರಮ ಕೈಗೊಂಡಿರುವರು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

ಅ)ಮತ್ತು ಆ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ರಿಂದ ೫೫ಕ್ಕೆ ಇಳಿಸುವ ಬಗ್ಗೆ ಈ ಹಿಂದೆ ಸದನದಲ್ಲಿ ಪ್ರಸ್ತಾಪಿಸಲಾಗಿತ್ತು. ಈ ಬಗ್ಗೆ ಸದನದಲ್ಲಿ ೩೧-೩-೧೯೯೧ರ ನಂತರವೇ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ಭರವಸೆ ನೀಡಲಾಗಿದೆ.

ಸ್ಪೆಷಲೈಡ್ ಪದವೀಧರರನ್ನು ಖಾಯಂಗೊಳಿಸುವುದು

೪೪. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ ?

(ಅ) ರಾಜ್ಯದಲ್ಲಿರುವ ಸ್ಪೆಷ್ಯೆಂಡರಿ ಪದವೀಧರರನ್ನು ಖಾಯಂಗೊಳಿಸುವ ಬಗ್ಗೆ ಸುಪ್ರೀಂ ಕೋರ್ಟಿನಿಂದ ಆದೇಶವೇನಾದರೂ ಬಂದಿದೆಯೇ ?

(ಆ) ಬಂದಿದ್ದಲ್ಲಿ ಈ ಆದೇಶದ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮವೇನು ?

ಶ್ರೀ ಪಿ. ಎಸ್. ನಾಡಿಗೇರಿ (ಕಾರ್ಮಿಕ ಸಚಿವರು).—

(ಅ) ಬಂದಿದೆ.

(ಆ) ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸಲು ಕ್ರಮವನ್ನು ತೆಗೆದು ಕೊಳ್ಳಲಾಗುತ್ತಿದೆ.

ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ತೊಂದರೆ

೪೬. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಕೋಲಾರ ಜಿಲ್ಲೆಯಲ್ಲಿ ಮುಂದಿನ ಬೇಸಿಗೆಯೊಳಗೆ ರೈತರಿಗೆ ವಿದ್ಯುಚ್ಛಕ್ತಿ ಅಭಾವವನ್ನು ಸರಿಪಡಿಸಲು ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳೇನು ?

(ಆ) ಜುಲೈ ವಿಧಾನಸಭೆ ಅಧಿವೇಶನದ ನಂತರ ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

(ಅ) ಕೋಲಾರ ಜಿಲ್ಲೆಯಲ್ಲಿ ಸರಬರಾಜಿನ ವ್ಯವಸ್ಥೆ ಸರಿಪಡಿಸಲು ಈ ಕೆಳಗಿನ ಕಾರ್ಯ ಕ್ರಮಗಳು ಪ್ರಗತಿಯಲ್ಲಿವೆ.

(೧) ಕೋಲಾರದಿಂದ ಶ್ರೀನಿವಾಸಪುರದವರೆಗೆ ೬೬ ಕೆ.ವಿ. ಲೈನನ್ನು ಎಳೆದು, ಶ್ರೀನಿವಾಸಪುರದಲ್ಲಿ ೬೬/೧೧ ಕೆ.ವಿ. ವಿದ್ಯುತ್ ಸ್ಟೇಷನ್‌ನ್ನು ಸ್ಥಾಪಿಸುವುದು.

(೨) ಕೋಲಾರದಿಂದ ಮುಳಬಾಗಿಲಿನವರೆಗೆ ೬೬ ಕೆ. ವಿ. ಲೈನನ್ನು ಎಳೆದು ಮುಳಬಾಗಿಲಿನಲ್ಲಿ ೬೬/೧೧ ಕೆ. ವಿ. ವಿದ್ಯುತ್ ಸಬ್‌ಸ್ಟೇಷನ್ ಸ್ಥಾಪಿಸುವುದು ಮತ್ತು ಸಂಬಂಧಪಟ್ಟ ಕೆಲಸಗಳು ಪ್ರಗತಿಯಲ್ಲಿದೆ.

(ಆ) ಜುಲೈ ವಿಧಾನ ಸಭೆ ಅಧಿವೇಶನದ ನಂತರವೂ 'ಅ'ನ ಉತ್ತರದಲ್ಲಿರುವ ಕೆಲಸಗಳು ಮುಂದುವರಿಯುತ್ತಿದೆ.